# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 469
ಸದಸ್ಯರ ಹೆಸರು : ಶ್ರೀ ಟಿ.ಎ. ಶರವಣ
(ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 15.09.2022
ಉತ್ತರಿಸಬೇಕಾದ ಸಚಿವರು : ಮುಖ್ಯಮಂತ್ರಿಯವರು

****

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಗಣ್ಯರಿಗೆ ಪರ್ಯಾಯ ನಿವೇಶನ ಹಂಚಿಕೆ ಯೋಜನೆಯಲ್ಲಿ ಎಷ್ಟು ಜನರಿಗೆ ಎಲ್ಲೆಲ್ಲಿ ನಿವೇಶನ ಹಂಚಲಾಯಿತು; ಅಳತೆ ಸಹಿತ ವಿವರ ನೀಡುವುದು; | ಒಟ್ಟು ನಾಲ್ಕು ಜನ ಗಣ್ಯರಿಗೆ 50x80 ಅಡಿ ಅಳತೆಯ ಹಾಗೂ ಒಬ್ಬ ಹಂಚಿಕೆದಾರರಿಗೆ 40 x 60 ಅಡಿ ಅಳತೆಯ ನಿವೇಶನಗಳನ್ನು ರಾಜಮಹಲ್ ವಿಲಾಸ 2ನೇ ಹಂತ (ಸರ್ವೆ ನಂ.17 ಭೂಪಸಂದ್ರ) ಬಡಾವಣೆಯಲ್ಲಿ ಪರ್ಯಾಯವಾಗಿ ಹಂಚಿಕೆ ಮಾಡಲಾಗಿದೆ. |
| ಆ) | ಸುಪ್ರಿಂ ಕೋರ್ಟ್ ಆದೇಶದ ಪ್ರಕಾರ ಈ ನಿವೇಶನಗಳನ್ನು ವಾಪಸ್ ಪಡೆಯಲಾಗಿದೆಯೇ; ಹಾಗಾದಲ್ಲಿ ಯಾರ ಯಾರ ನಿವೇಶನ ವಾಪಸ್ಸು ಪಡೆಯಲಾಗಿದೆ; | ದಿನಾಂಕ 25.08.2022 ರ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಮಾನ್ಯ ನಿವೃತ್ತ ನ್ಯಾಯ ಮೂರ್ತಿಗಳಾದ ಶ್ರೀ ಎ.ವಿ ಚಂದ್ರಶೇಖರ್ ರವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯಲ್ಲಿ ವಿಚಾರಣಾ ಹಂತದಲ್ಲಿದ್ದು, ವರದಿಯ ನಂತರ ಕ್ರಮವಹಿಸಲಾಗುವುದು. |
| ಇ) | ನಿಯಮಾವಳಿಗಳ ಅನುಸಾರ ಪರ್ಯಾಯ ನಿವೇಶನ ಹಂಚಿಕೆಗೆ ರಚಿಸಲಾಗಿರುವ ಉಪ ಸಮಿತಿಯಲ್ಲಿ ಚುನಾಯಿತ ಪ್ರತಿನಿಧಿಗಳು ನಾಮಕರಣಗೊಂಡ ಸದಸ್ಯರು, ಬಿಡಿಎ ಅಧ್ಯಕ್ಷರು ಸಮಿತಿಯ ಅಧ್ಯಕ್ಷರಾಗಿ ಇರುವಂತಿಲ್ಲ ಎಂದಿದ್ದರೂ ಬಿಡಿಎ ಅಧ್ಯಕ್ಷರಾದವರು ಉಪಸಮಿತಿಯ ಅಧ್ಯಕ್ಷರಾಗಿ ಸೈಟು ಹಂಚಿರುವುದು ಅಕ್ರಮವಲ್ಲವೇ; ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ 1976 ರ ಕಲಂ 9ರ ಪ್ರಕಾರ ರಚಿಸಲಾಗುವ ಎಲ್ಲಾ ಉಪಸಮಿತಿಗಳಿಗೆ ಪ್ರಾಧಿಕಾರದ ಅಧ್ಯಕ್ಷರು ಅಧ್ಯಕ್ಷರಾಗಿರುತ್ತಾರೆ.<br><br>ಅದರಂತೆ, ದಿನಾಂಕ:30ನೇ ಜನವರಿ 2021 ರಂದು ಜರುಗಿದ ಪ್ರಾಧಿಕಾರದ 2021ನೇ ಸಾಲಿನ ಪ್ರಥಮ ಸಭೆಯ ವಿಷಯ ಸಂಖ್ಯೆ:15/21ರಲ್ಲಿ ಕೆಳಕಂಡ ಸದಸ್ಯರನ್ನೊಳಗೊಂಡಂತೆ ಬದಲಿ ನಿವೇಶನ ಹಂಚಿಕೆ ಸಮಿತಿಯನ್ನು ರಚಿಸಲಾಗಿದೆ:-<br><br>1 ಅಧ್ಯಕ್ಷರು: — ಸಮಿತಿಯ ಅಧ್ಯಕ್ಷರು<br>2 ಅಭಿಯಂತರ ಸದಸ್ಯರು: — ಸದಸ್ಯರು<br>3 ನಗರ ಯೋಜಕ ಸದಸ್ಯರು: — ಸದಸ್ಯರು<br>4 ಆರ್ಥಿಕ ಸದಸ್ಯರು: — ಸದಸ್ಯರು<br>5 ಕಾರ್ಯದರ್ಶಿಗಳು: — ಸದಸ್ಯ ಕಾರ್ಯದರ್ಶಿಗಳು |

ಸಂಖ್ಯೆ: ನಅಇ 315 ಬೆಂಭೂಸ್ವಾ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ